# ಕರ್ನಾಟಕ ವಿಧಾನ ಸಭೆ
## ಹದಿನಾಲ್ಕನೇ ವಿಧಾನಸಭೆ
## ಎಂಟನೇ ಅಧಿವೇಶನ

# ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2015
## (2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 34)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 94ಸಿ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಕರೆಯಲಾಗಿದೆ) 94ಸಿ ಪ್ರಕರಣದ (viಇ) ಖಂಡದಲ್ಲಿ, "2400 ಚದರ ಅಡಿಯವರೆಗೆ" ಎಂಬ ಅಂಕಿಗಳು ಮತ್ತು ಪದಗಳಿಗೆ "4000 ಚದರ ಅಡಿಯವರೆಗೆ" ಎಂಬ ಅಂಕಿಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 95ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 95ನೇ ಪ್ರಕರಣದಲ್ಲಿ,–

(ಎ) (1)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:–

"ಪರಂತು, ಗರಿಷ್ಠ ಹತ್ತು ಗುಂಟೆಗಳಷ್ಟರವರೆಗೆ ಒಳಪಟ್ಟು, ಹಾಗೆ ಕಟ್ಟಲಾದ ಬೇಸಾಯದ ಕಟ್ಟಡ ಅಥವಾ ಬೇಸಾಯದ ಮನೆಯು ಆತನ ಹಿಡುವಳಿಯ ಶೇಕಡ ಹತ್ತಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ."

**ವಿವರಣೆ.–** ಈ ಉಪಪ್ರಕರಣದ ಉದ್ದೇಶಕ್ಕಾಗಿ "ಬೇಸಾಯದ ಕಟ್ಟಡ" ಅಥವಾ "ಬೇಸಾಯದ ಮನೆ" ಎಂದರೆ, ರೈತನ ವಸತಿಗಾಗಿ ಬಳಸಲಾದ ಅಥವಾ ಕೃಷಿ ಪರಿಕರಗಳನ್ನು ಇಡುವ ಉದ್ದೇಶಕ್ಕಾಗಿ ಬಳಸಲಾದ ಮತ್ತು ಜಾನುವಾರುಗಳನ್ನು ಕಟ್ಟಿಹಾಕಲು ಕೃಷಿ ಭೂಮಿಯ ಭಾಗದಲ್ಲಿ ನಿರ್ಮಾಣ ಮಾಡಲಾದ, ಜಮೀನಿಗೆ ಹೊಂದಿಕೊಂಡಿರುವ ಮನೆ ಮತ್ತು ಈ ಮನೆಯು ರೈತನಿಂದ ತನ್ನ ಸ್ವಂತ ಉಪಯೋಗಕ್ಕಾಗಿ ಬಳಸತಕ್ಕದ್ದು ಹಾಗೂ ಅದನ್ನು ಯಾವುದೇ ವ್ಯಕ್ತಿ ಅಥವಾ ಏಜೆನ್ಸಿಯ ವಾಣಿಜ್ಯ ಚಟುವಟಿಕೆಗಳಿಗೆ ನೀಡತಕ್ಕದ್ದಲ್ಲ."

(ಬಿ) (9)ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(10) ಯಾವುದೇ ಕೃಷಿ ಭೂಮಿಯ ಯಾವುದೇ ಅಧಿಭೋಗದಾರನು ಕೃಷಿ ಉದ್ದೇಶಕ್ಕಾಗಿ ನಿರ್ಧರಿಸಲಾದ ಅಥವಾ ಇರುವ ಅಂಥ ಭೂಮಿಯನ್ನು ಅಥವಾ ಅದರ ಭಾಗವನ್ನು ಸರ್ಕಾರದ ಆದೇಶ ಸಂಖ್ಯೆ: ಇಎನ್ 21 ವಿಎಸ್‌ಸಿ 2014 ದಿನಾಂಕ:22.05.2014ರಲ್ಲಿ ಕರ್ನಾಟಕ ಸೌರಶಕ್ತಿ ನೀತಿ 2014-21ರ ಅನುಸಾರವಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಅನುಮೋದಿಸಿರುವ ಮತ್ತು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿದ ಸೌರಶಕ್ತಿ ಉತ್ಪಾದಕವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಬದಲಿ ಉಪಯೋಗವನ್ನು ಮಾಡಲು ಬಯಸಿದಲ್ಲಿ, ಇದಕ್ಕಾಗಿ ಸಂದಾಯ ಮಾಡಬೇಕಾದ ಪರಿವರ್ತನೆ ದಂಡ ಮತ್ತು ಅಂಥ ಎಲ್ಲಾ ಇತರ ಪಾವತಿಸಬೇಕಾದ ಫೀಜುಗಳು, ಯಾವುದಾದರೂ ಇದ್ದಲ್ಲಿ, ಅವುಗಳ ಪಾವತಿಗೆ ಒಳಪಟ್ಟು, ಯಾವ ಉದ್ದೇಶಕ್ಕಾಗಿ ಅನುಮತಿಯನ್ನು ಮಂಜೂರು ಮಾಡಲಾಗಿದೆಯೋ ಆ ಉದ್ದೇಶಕ್ಕಾಗಿ ಅವರು ಅದನ್ನು ಬಳಸುವವರೆಗೂ, ಸಲ್ಲಿಸಲಾದ ಅನುಮತಿಯು ಮಂಜೂರಾಗಿದೆ ಎಂದು ಭಾವಿಸತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು, ಈ ಮುಂದಿನವುಗಳಿಗಾಗಿ, ಎಂದರೆ:-

(i) ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಭೂಮಿಯಲ್ಲಿ ವಾಸದ ಮನೆಯ ಅಕ್ರಮ ನಿರ್ಮಾಣವನ್ನು ಸಕ್ರಮಗೊಳಿಸುವ ಮಿತಿಯನ್ನು 94ಸಿ ಪ್ರಕರಣದ ಅಡಿಯಲ್ಲಿ 2400 ಚದರ

ಅಡಿಗಳಿಂದ 4000 ಚದರ ಅಡಿಗಳಿಗೆ ಹೆಚ್ಚಿಸುವುದಕ್ಕಾಗಿ;

(ii) ಬೇಸಾಯದ ಕಟ್ಟಡವನ್ನು ಅಥವಾ ಬೇಸಾಯದ ಮನೆಯನ್ನು ಕಟ್ಟುವುದಕ್ಕಾಗಿ ಬಳಸಬೇಕಾದ ಪ್ರದೇಶವನ್ನು ಒಟ್ಟು ಹಿಡುವಳಿಯ ಶೇಕಡಾ ಹತ್ತಕ್ಕೆ ಆದರೆ ಹತ್ತು ಗುಂಟೆಗಳನ್ನು ಮೀರದಂತೆ ಮಿತಿಗೊಳಿಸುವುದಕ್ಕಾಗಿ;

(iii) ಕರ್ನಾಟಕ ಸೌರಶಕ್ತಿ ನೀತಿ 2014-21ರ ಅನುಸಾರವಾಗಿ ಸೌರಶಕ್ತಿ ಉತ್ಪಾದಕ ಘಟಕವನ್ನು ಸ್ಥಾಪಿಸುವ ಕೃಷಿಯೇತರ ಉದ್ದೇಶಕ್ಕಾಗಿ ಕೃಷಿ ಭೂಮಿಯನ್ನು ಬದಲಿ ಉಪಯೋಗಕ್ಕೆ ಭಾವಿತ ಅನುಮತಿಯನ್ನು ಕಲ್ಪಿಸುವುದಕ್ಕಾಗಿ;

- ಉಪಬಂಧ ಕಲ್ಪಿಸುವುದಕ್ಕಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ವಿ. ಶ್ರೀನಿವಾಸ ಪ್ರಸಾದ್**
ಕಂದಾಯ ಸಚಿವರು

**ಎಂ. ಗುರುರಾಜ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

## ಅನುಬಂಧ

## ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12)

## ಉದ್ಧೃತ ಭಾಗ

**XXX XXX XXX**

**94ಸಿ. ಆಕ್ರಮಿತ ಭೂಮಿಯಲ್ಲಿನ ವಾಸದ ಮನೆಯ ನಿರ್ಮಾಣದ ಪ್ರಕರಣದಲ್ಲಿ ಭೂ ಮಂಜೂರಾತಿ.–**

**XXX XXX XXX**

(vi ಇ) 2400 ಚದರ ಅಡಿಯವರೆಗೆ ಕಟ್ಟಿದ ಮನೆ ಅಥವಾ ಕಟ್ಟಡ ಪ್ರದೇಶದ ವಾಸ್ತವಿಕವಾಗಿ ಆಕ್ರಮಿತವಾದ ಪ್ರದೇಶ ಅದರಲ್ಲಿ ಯಾವುದು ಕಡಿಮೆಯೋ ಅದನ್ನು ಸಕ್ರಮಗೊಳಿಸತಕ್ಕದ್ದು."

**XXX XXX XXX**

**95. ಬೇಸಾಯದ ಭೂಮಿಯ ಉಪಯೋಗಗಳು ಮತ್ತು ಬೇಸಾಯದ ಭೂಮಿಯನ್ನು ಇತರ ಉದ್ದೇಶಕ್ಕಾಗಿ ಉಪಯೋಗಿಸುವ ಬಗೆಗಿನ ವಿಧಾನ.–** (1) ಕಟ್ಟಡಗಳನ್ನು ಕಟ್ಟುವುದು ಅಥವಾ ಬಾವಿಗಳನ್ನು ಅಥವಾ ಕೆರೆಗಳನ್ನು ನಿರ್ಮಿಸುವುದು–ಇವುಗಳ ಬಗ್ಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು, ಕಂದಾಯ ವಿಧಿಸಲಾದ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಅಧಿಭೋಗದಾರನು, ಆ ಭೂಮಿಯ ಉತ್ತಮ ಕೃಷಿಗಾಗಿ ಅಥವಾ ಮೇಲೆ ಹೇಳಿದ ಉದ್ದೇಶದ ಬಗ್ಗೆ ಅದರ ಹೆಚ್ಚಿನ ಅನುಕೂಲಕರ ಉಪಯೋಗಕ್ಕಾಗಿ, ತಾನು ಖುದ್ದಾಗಿ ಅಥವಾ ತನ್ನ ನೌಕರರ, ಗೇಣಿದಾರರ, ಏಜೆಂಟರ ಅಥವಾ ಇತರ ವಾರಸುದಾರರ ಮೂಲಕ ಬೇಸಾಯದ ಕಟ್ಟಡಗಳನ್ನು ಕಟ್ಟಲು, ಬಾವಿ ಅಥವಾ ಕೆರೆಗಳನ್ನು ನಿರ್ಮಿಸಲು, ಅಥವಾ ಬೇರೆ ಯಾವುದೇ ಸುಧಾರಣೆಗಳನ್ನು ಮಾಡಲು ಹಕ್ಕುಳ್ಳವನಾಗಿರುತ್ತಾನೆ.

**XXX XXX XXX**

(9) ಯಾವೊಬ್ಬ ಅಧಿಭೋಗದಾರನು ಮೌಲ್ಯ ನಿರ್ಧರಿತ ಅಥವಾ ಕೃಷಿ ಉದ್ದೇಶಕ್ಕಾಗಿ ಹೊಂದಿರುವ ಭೂಪ್ರದೇಶವನ್ನು, ಸಣ್ಣ ಖನಿಜಗಳ ಗಣಿಗಾರಿಕೆಯನ್ನು ನಿಯಂತ್ರಿಸುತ್ತಿರುವ ನಿಯಮಗಳಿಗನುಸಾರವಾಗಿ ಸಣ್ಣ ಖನಿಜಗಳ ಗಣಿಗಾರಿಕೆಗಾಗಿ ಅಥವಾ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011ರ (2012ರ ಕರ್ನಾಟಕ ಅಧಿನಿಯಮ 8) ಅಡಿಯಲ್ಲಿ ಕಲ್ಲುಪುಡಿ ಮಾಡುವ ಚಟುವಟಿಕೆಯ ಉದ್ದೇಶಕ್ಕಾಗಿ ಅದನ್ನು ನಿರ್ದಿಷ್ಟಪಡಿಸಲಿ ಅಥವಾ ನಿರ್ದಿಷ್ಟಪಡಿಸದಿರಲಿ, ಅಂಥ ಭೂ ಪ್ರದೇಶ ಅಥವಾ ಯಾವುದಾದರೂ ಭಾಗವನ್ನು ಬದಲಿ ಉಪಯೋಗವನ್ನು ಮಾಡಲು ಇಚ್ಛಿಸಿದಾಗಲೆಲ್ಲ ಜಿಲ್ಲಾಧಿಕಾರಿಯವರಿಗೆ ಅಂಥ ಭೂ ಪ್ರದೇಶದ ಬದಲಿ ಉಪಯೋಗಕ್ಕಾಗಿ, ಅನ್ವಯವಾಗುವ ಜುಲ್ಮಾನೆಯೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಸದರಿ ಅಧಿನಿಯಗಳ ಅಡಿಯಲ್ಲಿ, ಗೇಣಿ ಅಥವಾ ಲೈಸೆನ್ಸ್ ಅಥವಾ ಕೆಲಸನಿರ್ವಹಿಸುವುದಕ್ಕೆ ಅನುಮತಿಯನ್ನು ಪಡೆಯುವುದಕ್ಕೊಳಪಟ್ಟು, ಅಂಥ ಅರ್ಜಿಗಳ ಮೇಲೆ ಅಂಥ ಭೂ ಪ್ರದೇಶದ ಬದಲಿ ಉಪಯೋಗಕ್ಕಾಗಿ ಅನುಮತಿಯು ಮಂಜೂರಾಗಿದೆ ಎಂದು ಭಾವಿಸತಕ್ಕದ್ದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ , 750–ಪ್ರತಿಗಳು 31ನೇ ಜುಲೈ, 2015

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**EIGHTH SESSION**

# THE KARNATAKA LAND REVENUE (AMENDMENT) BILL, 2015

**(L.A. Bill No. 34 of 2015)**

A Bill further to amend the Karnataka Land Revenue Act, 1964.

Whereas it is expedient further to amend the Karnataka Land Revenue Act, 1964 (Karnataka Act 12 of 1964) for the purposes hereinafter appearing;

Be it enacted by the Karnataka State Legislature in the Sixty-sixth year of the Republic of India, as follows:-

**1. Short title and commencement**.- (1) This Act may be called the Karnataka Land Revenue (Amendment) Act, 2015.

(2) It shall come into force at once.

**2. Amendment of section 94C.-** In section 94C of the Karnataka Land Revenue Act, 1964 (Karnataka Act 12 of 1964) (hereinafter referred to as the principal Act), in clause (vie), for the words and figures "upto 2,400 sq.feet", the words and figures "upto 4,000 sq.feet" shall be substituted.

**3. Amendment of section 95.-** In section 95 of the principal Act,-

(a) after sub-section (1) the following proviso shall be inserted, namely:-
"provided that the farm Building or farm House so erected shall not be more than ten percent of his holding subject to a maximum extent of ten guntas.

**Explanation**.- For the purpose of this sub-section "Farm Buildings" or "Farm house" means a house attached to a farm and constructed in a portion of an agricultural land, used for the residence of the agriculturist or used for the purpose of keeping agricultural equipments and tethering cattle. The house shall be used by farmer for his own use and it shall not be let out for commercial activities to any individual or agency."

(b) after sub-section (9), the following shall be inserted, namely:-

"(10) If any occupant of any agriculture land assessed or held for the purpose of agriculture wishes to divert such land or part thereof for the purpose of setting up of solar power generation in accordance with Karnataka Solar Policy 2014-21 issued in G.O EN 21 VSC 2014 dated 22.05.2014 which has been approved by State and Central Government and which has been approved by the Competent Authority, the permission applied for conversion of such land shall be deemed to have been granted for that purpose so long as they use for purpose for which permission is granted subject to payment of the conversion fine and all such other fees payable if any, in this regard."

## STATEMENT OF OBJECTS AND REASONS

It is considered necessary to amend the Karnataka Land Revenue Act, 1964 to,-

(i) enhance the limit of regularization of unauthorised construction of dwelling house in Government Land in rural areas under section 94 C from 2400 Sq.feet to 4000 Sq.feet;

(ii) to limit the area to be utilized for construction of Farm Building or Farm House to ten percent of the total holding but not exceeding ten guntas;

(iii) to provide for deemed permission for conversion of agricultural land for purpose of non-agricultural purpose of setting up of Solar Power generation unit in accordance with Karnataka Solar Policy, 2014-21.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**V. SRINIVASA PRASAD**
Minister for Revenue

**M. GURURAJA**
Secretary
Karnataka Legislative Assembly

**ANNEXURE**

**EXTRACT FROM THE KARNATAKA LAND REVENUE ACT, 1964**

**(KARNATAKA ACT 12 OF 1964)**

**XX XX XX**

**94C. Grant of Land in case of construction of dwelling housein occupied land.-**

**XX XX XX**

(vie) The area actually occupied by the built up house or built up area upto 2,400 sq.feet whichever is less shall be regularized.

**XX XX XX**

**95. Uses of agricultural land and the procedure for use of agricultural land for other purpose.**—(1) Subject to any law for the time being in force regarding erection of buildings or construction of wells or tanks, an occupant of land assessed or held for the purpose of agriculture is entitled by himself, his servants, tenants, agents, or other legal representatives, to erect farm buildings, construct wells or tanks, or make any other improvements thereon for the better cultivation of the land or its more convenient use for the purpose aforesaid.

**XX XX XX**

(9) whenever any occupant of land assessed or held for purpose of agriculture wishes to divert such land or any part thereof for the purpose of quarrying of minor minerals, whether specified or non specified in accordance with the rules governing quarrying of minor minerals or stone crushing activity under the Karnataka regulation of stone crushers Act, 2011 (Karnataka Act 8 of 2012), shall make an application along with the fine applicable to the Deputy Commissioner for diversion of such land. On such application, the permission for diversion of such land shall be deemed to have been granted subject to obtaining lease or licence or working permission under the said enactments.

**XX XX XX**

Government Press, Vikasa Soudha, Bengaluru, P7, W.D. , Copies 750, 31st, 2015